ಮುಖ್ಯ ನಮ್ಮ ಲೋಭದ ಕರ್ಮ ಬಂಧದಿಂದ, ಮೇಣದಿಂದ ತಪ್ಪಿಸಿಕೊಳ್ಳಬೇಕು' ಎಲ್ಲ ಕೇಳಿಸಿಕೊಳ್ಳುತ್ತಿದ್ದ ಬಚ್ಚ ಆರಾಮವಾಗಿ ಯೋಚಿಸುತ್ತ, 'ಕೈಗೆ ಸ್ವಲ್ಪ ತೆಂಗಿನೆಣ್ಣೆ ಸವರಿಕೊಳ್ಳಬೇಕು. ಆಗ ಎಂಥ ಮೇಣ ಇದ್ದರೂ ಕೈಗೆ ಹಿಡಿಯುವುದಿಲ್ಲ' ಎಂಬ ಪ್ರಾಯೋಗಿಕ ಪರಿಹಾರ ನೀಡಿದ. ಈ ಉದಾಹರಣೆ ರಾಜರಿಗೆ ಸಂತೋಷಾತಿರೇಕವನ್ನೇ ನೀಡಿತು.

'ಹೌದು ಬಚ್ಚ. ನಿನಗೆ ಈಗ ಸ್ವಲ್ಪ ಸ್ವಲ್ಪ ಅರ್ಥವಾಗಲು ಸುರುವಾಯಿತು. ನೋಡು ಎಣ್ಣೆ ಅಂದೆಯಲ್ಲ, ಅದೇ ಯೋಗ. ಅದೇ ನಮ್ಮನ್ನು ಕರ್ಮಬಂಧನದಿಂದ, ಆಶಾಪಾಶಗಳಿಂದ ದೂರವಿರಿಸಿ ಕಾಪಾಡಬೇಕು. ಎಣ್ಣೆ ಮೇಣವನ್ನು ಜಾರಿಸುವಂತೆ ಯೋಗ ನಮ್ಮ ಎಲ್ಲ ಕಷ್ಟ ಕಾರ್ಪಣ್ಯಗಳಿಂದ, ಚಿಂತೆಯಿಂದ, ಎಲ್ಲದರಿಂದ ಪಾರಾಗುವಂತೆ ಮಾಡುತ್ತದೆ. ಅದಕ್ಕೇ ನಾವು ಯೋಗ ಮಾಡಬೇಕು. ಇದು ಅಧ್ಯಾತ್ಮ ಸಾಧನೆಯ ಹಾದಿ...' ಅಂತೇನೇನೋ ಹೇಳ ಹೊರಟ ಮಾತನ್ನು ಅರ್ಧಕ್ಕೇ ತಡೆದು,

'ಎಣ್ಣೆ ಅಂದಾಗ ನೆನಪಾಯಿತು ನೋಡಿ ಎಲ್ಲದರಿಂದ ಪಾರಾಗುವುದಕ್ಕೆ ಎಣ್ಣೆ ಹಾಕಿದರೂ ಆಗುತ್ತದೆ. ಎಲ್ಲ ನೋವು ಮಾಯ ಆಗಿ ಅಲ್ಲೇ ನಿದ್ರೆ ಬರುತ್ತದೆ' ಎಂದು ಬಚ್ಚ ತನ್ನದೇ ವಿವರಣೆ ನೀಡಿದ. ತಕ್ಷವೇ ಕೋಪಗೊಂಡ ರಾಜರು,

'ನಿನ್ನಂಥ ಮೂರ್ಖರು ಈ ದೇಶದಲ್ಲಿ ತುಂಬಿದ್ದರಿಂದಲೇ ದೇಶ ಉದ್ಧಾರ ಆಗಲಿಲ್ಲ. ನಿನ್ನಂಥವರು ಇರುವವರೆಗೂ ಉದ್ಧಾರ ಆಗವುದೂ ಇಲ್ಲ' ಅಂತ ಗುಡುಗಿದರು. ನಂತರ ತುಸು ನಿಧಾನವಾಗಿ ತಮ್ಮ ಬೋಧನೆ ಮುಗಿಸುವ ಹಂತಕ್ಕೆ ಬಂದು ಮೌಲ್ಯಮಾಪನಕ್ಕೆ ತೊಡಗಿದರು.

'ನಾನು ಈಗ ಪರಮಾತ್ಮನಿಗೆ ಯಾವ ಹೋಲಿಕೆ ಕೊಟ್ಟೆ ಹೇಳು' ಅಂತ ಸರಳವಾದ ಪ್ರಶ್ನೆ ಕೇಳಿದರು. ಬಚ್ಚ ಯೋಚಿಸುತ್ತ ಕುಳಿತ ಹೊರತು ಉತ್ತರ ತೋಚದೆ ಮೌನವಾದ. ರಾಜರೇ ಹೇಳಿದರು,

'ಇಂಬದ ಹೋಲಿಕೆ, ಹಲಸಿನ ಹಣ್ಣು ಅಂದರೆ ಪರಮಾತ್ಮ ಅಂದೆ ನೆನಪಾಯ್ತೋ?' ಅಂತ ಪುನಃ ವಿವರಿಸಿ ಕೇಳಿದರು.

'ನಾವು ಎಣ್ಣೆಗೆ ಪರಮಾತ್ಮ ಅಂತೇವೆ. ನೀವು ಹಣ್ಣಿಗೆ ಪರಮಾತ್ಮ ಅಂತೀರಿ. ಎಲ್ಲ ಒಂದೇ ಅಲ್ಲವಾ' ಅಂತ ಮರು ಪ್ರಶ್ನಿಸಿದ. ಕೋಪಗೊಂಡರೂ ತೋರಿಸಿಕೊಳ್ಳದ ಪ್ರಕಾಶರು,

'ನೀನಿನ್ನೂ ಅಧ್ಯಾತ್ಮದ ಅ, ಆ, ಇ ಕಲಿತಿಲ್ಲ. ಹಾಗೆ ನೀನು ಏನು ಹೇಳಿದರೂ ಬೇಜಾರಿಲ್ಲ. ಆದರೆ ನೀನೂ ಕಲೀಬೇಕು. ನಿನ್ನಂಥ ಪ್ರತಿಯೊಬ್ಬರಿಗೂ ಅಧ್ಯಾತ್ಮ ಗೊತ್ತಾದರೆ ನಮ್ಮದು ರಾಮರಾಜ್ಯವಾಗದೆ ಇದ್ದೀತೆ? ನಮ್ಮ ದೇಶಕ್ಕೆ ಭವ್ಯವಾದ ಸನಾತನ ಪರಂಪರೆ ಇದೆ. ಇಲ್ಲಿ ಋಷಿ ಮುನಿಗಳು ತಪಸ್ಸು ಮಾಡಿ ನೇರ ಪರಮಾತ್ಮನಿಂದಲೇ ಅಧ್ಯಾತ್ಮ ಜ್ಞಾನ ಗಳಿಸಿಕೊಂಡಿದ್ದರು. ಆ ಇಂಗ್ಲಿಷರು ಬಂದು ಎಲ್ಲ ಹಾಳಾಯಿತು. ತಾಯಿಯನ್ನು ಕೊನೆಗಾಲದಲ್ಲಿ ಕಡೆಗಣಿಸುವ ಹಾಗೆ ಮಾತೃಭೂಮಿಯನ್ನು ಕಡೆಗಣಿಸಿ ನಮ್ಮ ಜನ ಶಾಪಗ್ರಸ್ಥರಾಗಿದ್ದಾರೆ. ಇದರಿಂದ ವಿಮೋಚನೆ ಹೊಂದಿ ರಾಷ್ಟ್ರಪ್ರೇಮವನ್ನು ಜಾಗೃತಗೊಳಿಸಿಕೊಂಡಾಗ ಅಧ್ಯಾತ್ಮ ಅರಿವಿಗೆ ಬರುತ್ತದೆ. ಅದಿರಲಿ, ನೀನು ಪ್ರಶ್ನೆ ಕೇಳುತ್ತೀಯಲ್ಲ ಅದು ಮಾತ್ರ ಬಹಳ ಒಳ್ಳೆಯದು. ಇನ್ನೂ ಕೇಳು. ಆದರೆ ಇದಕ್ಕಿಂತ ಸ್ವಲ್ಪ ದೊಡ್ಡದು, ಸ್ವಲ್ಪ ಗಟ್ಟಿಯಾದದ್ದು ಕೇಳು. ನಾನು ಯಾವುದೇ ಕ್ಷಣದಲ್ಲೂ ಉತ್ತರ ಹೇಳ್ತೇನೆ. ಮುಖ್ಯ ನಿನ್ನಲ್ಲಿ ಚಿಂತನೆಗಳು ಹುಟ್ಟಬೇಕು. ಈಗ ಹೇಳು, ಪುನಃ ಕೇಳ್ತೇನೆ, ಪರಮಾತ್ಮನಿಗೆ ನಾನು ಕೊಟ್ಟ ಹೋಲಿಕೆ ಹೇಳು.'

'ಇಂಬನ ಹಣ್ಣು.'